ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
(ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಕಚೇರಿ,
ಬಂದರು ಉಪವಿಭಾಗ, ಹೊನ್ನಾವರ -581334 (ಉತ್ತರ ಕನ್ನಡ ಜಿಲ್ಲೆ)

ದೂರವಾಣಿ:08387-220865 ಇ ಮೇಲ್ ವಿಳಾಸ:aeepsdh@gmail.com

ಕ್ರ.ಸಂ.ಸಕಾನಿಇಂ/ಬಂಉವಿಹೊ/ 203 ದಿನಾಂಕ: 05-12-19

ಇವರಿಗೆ:

ಜಿಲ್ಲಾಧಿಕಾರಿಗಳು,
ಉತ್ತರ ಕನ್ನಡ ಜಿಲ್ಲೆ
ಕಾರವಾರ.

ಮಾನ್ಯರೇ,

ವಿಷಯ: ಹೊನ್ನಾವರ ಬಂದರು ಅಭಿವೃದ್ಧಿ ಯೋಜನೆಗೆ ರಾಷ್ಟ್ರೀಯ ಹೆದ್ದಾರಿ-66 ರಿಂದ ಕಾಸರಕೋಡ ಗ್ರಾಮದವರೆಗೆ ರಸ್ತೆಯ ಸಂಪರ್ಕವನ್ನು ಕಲ್ಪಿಸಲು ಅರಣ್ಯ ಜಾಗವನ್ನು ಗುತ್ತಿಗೆ ಪಡೆಯಲು ನಿರಾಪೇಕ್ಷಣಾ ಪತ್ರ ನೀಡುವ ಕುರಿತು.

ಉಲ್ಲೇಖ: 1) ಹೊನ್ನಾವರ ಪೋರ್ಟ ಪ್ರೈ.ಲಿಮಿಟೆಡ್ ಇವರ ಪತ್ರ ದಿನಾಂಕ 06-08-2019.
2) ಈ ಕಚೇರಿ ಪತ್ರ ಸಂಖ್ಯೆ ಸ.ಕಾ.ನಿ.ಇಂ/ಬಂಉವಿಹೊ/105/ದಿನಾಂಕ 14-08-2019.
3) ಹೊನ್ನಾವರ ಪೋರ್ಟ ಪ್ರೈ.ಲಿಮಿಟೆಡ್ ಇವರ ಪತ್ರ ದಿನಾಂಕ 26-11-2019.

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉದ್ದೇಶಿತ ಹೊನ್ನಾವರ ಬಂದರು ಅಭಿವೃದ್ಧಿ ಯೋಜನೆಗೆ ರಾಷ್ಟ್ರೀಯ ಹೆದ್ದಾರಿ-66 ರಿಂದ ಕಾಸರಕೋಡ ಗ್ರಾಮದ ಬೀಚ್‌ವರೆಗೆ ರಸ್ತೆಯ ಸಂಪರ್ಕವನ್ನು ಕಲ್ಪಿಸಲು ಅರಣ್ಯ ಜಾಗವನ್ನು ಪಡೆಯುವ ಸಲುವಾಗಿ Forest Online Application ಪ್ರೊಸೆಸ್ ಮಾಡಲು ಹಾಗೂ ಅನುಮೋದನೆ ಪಡೆಯಲು ನಿರಾಕ್ಷೇಪಣಾ ಪತ್ರವು ಅತ್ಯಾವಶ್ಯಕವಾಗಿರುತ್ತದೆ. ಆದ್ದರಿಂದ, ರಾಷ್ಟ್ರೀಯ ಹೆದ್ದಾರಿಯಿಂದ ಕಾಸರಕೋಡ ಗ್ರಾಮದ ಬೀಚ್‌ವರೆಗೆ ರಸ್ತೆಯನ್ನು ನಿರ್ಮಾಣ ಮಾಡಲು Recongition of Forest Rights(RoFR) ಅಡಿಯಲ್ಲಿ ಕಾಸರಕೋಡ ಗ್ರಾಮದ ಅರಣ್ಯ ಜಾಗವಾದ ಸರ್ವೆ.ನಂಬರ್ 232 ಮತ್ತು 233 ರಲ್ಲಿ ರಾಷ್ಟ್ರೀಯ ಹೆದ್ದಾರಿಯಿಂದ ಕಾಸರಕೋಡ ಗ್ರಾಮದ ಬೀಚ್‌ವರೆಗೆ ರಸ್ತೆಯನ್ನು ನಿರ್ಮಾಣ ಮಾಡಲು ನಿರಾಪೇಕ್ಷಣಾ ಪತ್ರವನ್ನು ನೀಡುವಂತೆ ಉಲ್ಲೇಖಿತ ಪತ್ರ (2) ರಲ್ಲಿ ಕೋರಲಾಗಿತ್ತು. ಆದರೆ, ಈ ಪತ್ರದಲ್ಲಿ ಸರ್ವೆ ನಂಬರ 232 ಎಂದು ತಪ್ಪಾಗಿ ನಮೂದಾಗಿದ್ದು, ಇದರ ಬದಲಿಗೆ ಕಾಸರಕೋಡ ಗ್ರಾಮದ ಅರಣ್ಯ ಜಾಗ ಸರ್ವೆ ನಂಬರ್ 237 ಎಂದು ಪರಿಗಣಿಸಿ ರಾಷ್ಟ್ರೀಯ ಹೆದ್ದಾರಿಯಿಂದ ಕಾಸರಕೋಡ ಗ್ರಾಮದ ಬೀಚ್‌ವರೆಗೆ ಅಂದರೆ ಕಾಸರಕೋಡ ಗ್ರಾಮದ ಅರಣ್ಯ ಜಾಗದ ಸರ್ವೆ ನಂಬರ್.233 ಮತ್ತು 237 ರಲ್ಲಿ ರಸ್ತೆ ನಿರ್ಮಾಣ ಮಾಡಲು ನಿರಾಕ್ಷೇಪಣಾ ಪತ್ರ ನೀಡಲು ಕೋರಿದೆ. ಸದರಿ ಜಾಗಕ್ಕೆ ಸಂಬಂಧಿಸಿದ ನಕಾಶೆ, ಗೇಣಿ ಮತ್ತು ಪಹಣಿ ಪತ್ರವನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ವಿನಂತಿಸಿ ಗೌರವದೊಂದಿಗೆ ಸಲ್ಲಿಸಿದೆ.

ಅಡಕ:ಮೇಲಿನಂತೆ

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರರು
ಬಂದರು ಉಪವಿಭಾಗ, ಹೊನ್ನಾವರ
ಹಾಗೂ ನೋಡಲ್ ಅಧಿಕಾರಿ